**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ.1014/2023**

**ಪಿರ್ಯಾದುದಾರರು** ಃ ತರೀಕೆರೆ ಪೊಲೀಸ್

**-ವಿರುದ್ದ-**

**ಆರೋಪಿ/ತರು** ಃ ದಿನೇಶ್

**-ಃದೋಷಾರೋಪಣೆಃ-**

**ಶ್ರೀ ವೈದ್ಯ ಶ್ರೀಕಾಂತ್,** ಬಿ.ಎಸ್ಸಿ, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

ದಿನೇಶ್ ಬಿನ್ ಲೇಟ್ ನಂಜುಂಡಪ್ಪ, 40 ವರ್ಷ,
ಕೂಲಿ ಕೆಲಸ, ವಾಸಃಬೆಟ್ಟದಹಳ್ಳಿ ಗ್ರಾಮ,
ತರೀಕೆರೆ ತಾಃ

ಆದ ನಿಮ್ಮ ವಿರುದ್ದ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕಃ27.02.2023 ರಂದು 5-30 ರ ಸಮಯದಲ್ಲಿ ತರೀಕೆರೆ ಪೊಲೀಸ್ ಠಾಣಾ ಸರಹದ್ದಿನ ಬೆಟ್ಟದಹಳ್ಳಿ ಗ್ರಾಮದ ಎನ್ ಹೆಚ್ 206 ರಸ್ತೆಯ ಕೆರೆಯ ಪಕ್ಕದಲ್ಲಿ ಆರೋಪಿಯಾದ ನೀವು ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಒಟ್ಟು ರೂ.1475.46 ಮೌಲ್ಯದ 90 ಎಂ ಎಲ್ ನ ಓರಿಜಿನಲ್ ಚಾಯ್ಸ್ ವಿಸ್ಕಿಯ 42 ಪೌಚ್ ಗಳನ್ನು ಹೊಂದಿ, ಆ ಮೂಲಕ ನೀವು **ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32** ರ ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಅದೇ ದಿನ, ಅದೇ ಸಮಯ, ಸ್ಥಳ ಹಾಗೂ ವಿಚಾರದಲ್ಲಿ ಆರೋಪಿಯಾದ ನೀವು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಒಟ್ಟು ರೂ.1475.46 ಮೌಲ್ಯದ 90 ಎಂ ಎಲ್ ನ ಓರಿಜಿನಲ್ ಚಾಯ್ಸ್ ವಿಸ್ಕಿಯ

42 ಪೌಚ್ ಗಳನ್ನು ಅಕ್ರಮವಾಗಿ ಇಟ್ಟುಕೊಂಡು ಲಾಭಕ್ಕಾಗಿ ಮಾರಾಟ ಮಾಡುತ್ತಿದ್ದು, ಆ ಮೂಲಕ ನೀವು **ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34** ರ ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 01.07.2024

Sd/-
**(ವೈದ್ಯ ಶ್ರೀಕಾಂತ್)**
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರಃ 1)ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉಃ

ಪ್ರಃ 2)ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?
ಉಃ

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ 01.07.2024

Sd/-
ಹಿ. ಪ್ರಧಾನ ಪ್ರ.ದ.ನ್ಯಾ.ದಂ ತರೀಕೆರೆ.

ಆರೋಪಿ/ತರ ಸಹಿಃ